# ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಫೋನ ನಂಬರ:-221830/256950
ಫ್ಯಾಕ್ಸ್ ನಂಬರ:-256403
ಇ-ಮೇಲ:-seeonmcrl@gmail.com

ಅಧೀಕ್ಷಕಅಭಿಯಂತರರು (ವಿ),ರವರಕಛೇರಿ,
ಕಾರ್ಯ ಮತ್ತು ಪಾಲನೆ ವೃತ್ತ ,
ಗು.ವಿ.ಸ.ಕಂ.ನಿ, ಕಲಬುರಗಿ.


ಅ.ಅ.(ಕಾ ಮತ್ತು ಪಾ ವೃತ್ತ)/ಕ/ಕಾನಿಅ(ಕ)/ಸಕಾನಿಅ-2/19-20/ 4017-18 ದಿನಾಂಕ: 03 AUG 2019

ಲಗತ್ತು : (2)

ಗೆ,

ಕಾರ್ಯ ನಿರ್ವಾಹಕ ಅಭಿಯಂತರರು (ವಿ).,
ನಿಯಂತ್ರಣ ವ್ಯವಹಾರ ಶಾಖೆ
ನಿಗಮ ಕಛೇರಿ ಜೆಸ್ಕಾಂ ಕಲಬುರಗಿ.

ಮಾನ್ಯರೇ,

**ವಿಷಯ:-** ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ ಮೇರೆಗೆ ಜೆಸ್ಕಾಂ ವೆಬ್‌ಸೈಟ್‌ನಲ್ಲಿ ಸಂಪರ್ಕ ಸಭೆಯ ನಡವಳಿಗಳನ್ನು ಅಪ್ ಲೋಡ್ ಮಾಡುವ ಬಗ್ಗೆ.

*******

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯ ಮತ್ತು ಪಾಲನೆ ವೃತ್ತ ಕಛೇರಿ ಕಲಬುರಗಿ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ತೋರಿಸಿದ ಉಪ-ವಿಭಾಗಗಳಲ್ಲಿ ಗ್ರಾಹಕರ ಸಂವಾದ ಸಭೆಗಳನ್ನು ಜರುಗಿಸಲಾಗಿರುತ್ತದೆ.

1. ಯಾದಗಿರಿ ಉಪ-ವಿಭಾಗ ದಿನಾಂಕ: 11.07.19 ಸಮಯ: ಬೆಳಿಗ್ಗೆ 10.00 ರಿಂದ 12.00.
2. ಗುರುಮಿಟಕಲ್ ಉಪ-ವಿಭಾಗ ದಿನಾಂಕ: 11.07.19. ಸಮಯ: ಮಧ್ಯಾಹ್ನ 02.30 ರಿಂದ 04.30.

ಸಭೆಯ ನಡವಳಿಗಳ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ ಮೇರೆಗೆ ಜೆಸ್ಕಾಂ ವೆಬ್‌ಸೈಟ್ ನಲ್ಲಿ ಜನ ಸಂಪರ್ಕ ಸಭೆಯ ನಡವಳಿಗಳನ್ನು ಅಪಲೋಡ್ ಮಾಡಲು ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಅಧೀಕ್ಷಕಅಭಿಯಂತರರು (ವಿ),
ಕಾರ್ಯ ಮತ್ತು ಪಾಲನೆ ವೃತ್ತ
ಗು.ವಿ.ಸ.ಕಂ.ನಿ. ಕಲಬುರಗಿ.

**ಪ್ರತಿಗಳು:-**

ಕಾರ್ಯನಿರ್ವಾಹಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನೆ ವಿಭಾಗ ಜೆಸ್ಕಾಂ, ಯಾದಗಿರಿ.

ಕಛೇರಿ ಪತ್ರ;ಸ.ಕಾ.ನಿ.ಅ.-2/ಮು.ಕ

# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ಫೋನ್ ನಂಬರ:-221830/256950
ಫ್ಯಾಕ್ಸ ನಂಬರ:-256403
ಇ-ಮೇಲ್:-seeonmcrl@gmail.com

ಇವರ ಕಛೇರಿ,
ಅಧೀಕ್ಷಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನೆ ವೃತ್ತ
ಗು.ವಿ.ಸ.ಕಂ.ನಿ, ಕಲಬುರಗಿ.

***********************************************************************************************************************

(ಅಅ(ವಿ) ಕಾ ಮತ್ತು ಪಾ ವೃತ್ತ)/ಕ/ಕಾನಿಅ(ಕ)/ಸಕಾನಿಅ-2/19-20 3010-11 ದಿನಾಂಕ : 31/7/19

## ದಿನಾಂಕ 11-07-2019ರ ಜನ ಸ್ಪಂದನ ಸಭೆಯ ನಡಾವಳಿಗಳು

ದಿನಾಂಕ 11-07-2019 ರಂದು ಯಾದಗಿರಿ ಉಪ-ವಿಭಾಗದಲ್ಲಿ ಮಾನ್ಯ ಶ್ರೀ.ಮೋಹನ್ ಕುಮಾರ್ ಆರ್.ಎಸ್ ಅಧೀಕ್ಷಕ ಅಭಿಯಂತರರು (ವಿ) ಕಾ ಮತ್ತು ಪಾ ವೃತ್ತ ಕಛೇರಿ ಗು.ವಿ.ಸ.ಕಂ.ನಿ ಕಲಬುರ್ಗಿ ಇವರ ಅಧ್ಯಕ್ಷತೆಯಲ್ಲಿ ಗ್ರಾಹಕರ ಕುಂದು ಕೊರತೆಯ ಕುರಿತು ಜನಸ್ಪಂದನ ಕಾರ್ಯಕ್ರಮವನ್ನು ಜರುಗಿಸಲಾಯಿತು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :**

1. ಶ್ರೀ ಮೋಹನ್ ಕುಮಾರ್ ಅಧೀಕ್ಷಕ ಅಭಿಯಂತರರು(ವಿ) ಕಾ ಮತ್ತು ಪಾ ಕಲಬುರ್ಗಿ ವೃತ್ತ ಕಛೇರಿ ಗು.ವಿ.ಸ.ಕಂ.ನಿ.
2. ಶ್ರೀ ವಿಶ್ವನಾಥ ರೆಡ್ಡಿ ಸ.ಕಾ.ನಿ.ಅ(ವಿ) ಉಪ ವಿಭಾಗ ಯಾದಗಿರಿ.
3. ಶ್ರೀ ಚಂದ್ರಕಾಂತ ಶಾಖಾಧಿಕಾರಿಗಳು ಘಟಕ-2 ಯಾದಗಿರಿ ಶಾಖೆ.
4. ಶ್ರೀ ಗಂಗಾಧರ ಶಾಖಾಧಿಕಾರಿಗಳು ಘಟಕ-1 ಯಾದಗಿರಿ ಶಾಖೆ.
5. ಶ್ರೀ ಅಕ್ಷಯ ಕುಮಾರ, ಶಾಖಾಧಿಕಾರಿಗಳು ಸೈದಾಪುರ ಶಾಖೆ.
6. ಶ್ರೀ ಈರಪ್ಪ ಶಾಖಾಧಿಕಾರಿಗಳು ಹತ್ತಿಕುಣಿ ಶಾಖೆ.
7. ಶ್ರೀ ವೀರಭದ್ರಯ್ಯ ಸ್ವಾಮಿ ಶಾಖಾಧಿಕಾರಿಗಳು ಮುದ್ನಾಳ್ ಶಾಖೆ.
8. ಶ್ರೀ ರಾಜು ಶಾಖಾಧಿಕಾರಿಗಳು ಯರಗೋಳ್ ಶಾಖೆ.

**ಸಭೆಯ ನಡುವಳಿಗಳು**

ಸಭೆಯಲ್ಲಿ ಗ್ರಾಹಕರು ವಿದ್ಯುತ್ ಸಮಸ್ಯೆಗಳ ಕುರಿತು ಶ್ರೀ ಮೋಹನ್ ಕುಮಾರ್ ಅ.ಇಂ(ವಿ) ಹಾಗೂ ಶ್ರೀ ವಿಶ್ವನಾಥ ರೆಡ್ಡಿ ಸ.ಕಾ.ನಿ.ಅ(ವಿ) ಉಪ ವಿಭಾಗ ಯಾದಗಿರಿ ಇವರಿಗೆ ಕೇಳಿರುವ ಹಾಗೂ ಆ ಸಮಸ್ಯೆಗಳಿಗೆ ಪರಿಹಾರ ಸೂಚಿಸಿರುವ ವಿವರ ಈ ಕೆಳಗಿನಂತಿವೆ.

1. ಶ್ರೀ ಮರೆಪ್ಪ ಠಾಣಾಗುಂದಿ ತಾಲ್ಲೂಕ ಪಂಚಾಯತ್ ಸದಸ್ಯರು, ಠಾಣಾಗುಂದಿ ಫೀಡರ್‌ನ ವಿದ್ಯುತ್ ತಂತಿಗಳು ಹಳೆಯದಾಗಿರುತ್ತವೆ ಹಾಗೂ ವಿದ್ಯುತ್ ಸರಬರಾಜಿನಲ್ಲಿ ಅಡಚಣೆಯಾಗುತ್ತಿದೆ. ಬಹಳಷ್ಟು ಬಾರಿ ಲೈನ್‌ಫಾಲ್ಟ್ ಬರುತ್ತಿದೆ ಮತ್ತು ಠಾಣಾಗುಂದಿ ಹತ್ತಿರ ಒಂದು ಜಿ.ಓ.ಎಸ್ ಅಳವಡಿಸಲು ಕೋರಿರುತ್ತಾರೆ.

   ಇದಕ್ಕೆ ಸಹಾಯಕ ಕಾರ್ಯಾನಿರ್ವಾಹಕ ಅಭಿಯಂತರರು (ವಿ) ಉತ್ತರಿಸುತ್ತಾ ಎನ್.ಜೆ.ವಾಯ್ ಕಾಮಾಗಾರಿ ಮುಕ್ತಾಯದ ಹಂತದಲ್ಲಿರುತ್ತದೆ. ಇನ್ನು ಕೆಲವೆ ದಿನಗಳಲ್ಲಿ ಎನ್.ಜೆ.ವಾಯ್ ಫೀಡರ್‌ನಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗದಂತೆ ಸರಿಹೋಗುತ್ತದೆ ಹಾಗೂ ಜಿ.ಓ.ಎಸ್ ಅಳವಡಿಸಲು ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಸಿದರು. ಸದರಿ ವಿಷಯಕ್ಕೆ ಮಾನ್ಯ ಅಧೀಕ್ಷಕ ಅಭಿಯಂತರರು(ವಿ) ರವರು ಕಾಮಗಾರಿಯ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸಲು ಸೂಚಿಸಿದರು.

2. ಶ್ರೀ ವಿರೇಂದ್ರ ಪಾಟೀಲ್, ನಿರ್ವಹಣಾ ಸಿಬ್ಬಂದಿಗಳು ಫೋನ್ ಕಾಲ್ ಮಾಡಿದರೆ ಸ್ವೀಕರಿಸುವುದಿಲ್ಲ ಎಂಬುದನ್ನು ಗಮನಕ್ಕೆ ತಂದರು.

   ಸದರಿ ವಿಷಯಕ್ಕೆ ಅಧಿಕ್ಷಕ ಅಭಿಯಂತರರು (ವಿ) ವಿಷಾದವನ್ನು ವ್ಯಕ್ತಪಡಿಸುತ್ತಾ ಇನ್ನು ಮುಂದೆ ಎಲ್ಲಾ ಸಿಬ್ಬಂದಿಗಳು ದೂರವಾಣಿ ಕರೆಗಳನ್ನು ಕಡ್ಡಾಯವಾಗಿ ಸ್ವೀಕರಿಸಲು ತಿಳಿಸಿ, ಮುಂದೆ ಈ ರೀತಿಯ ದೂರುಗಳು ಬರದಂತೆ ಕ್ರಮ ಕೈಗೊಳ್ಳಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಯಾದಗಿರಿ ರವರಿಗೆ ಆದೇಶಿಸಿದರು.

3. ಶ್ರೀ ಪಾಲ್ ದಾಲ್ ಇಂಡಸ್ಟ್ರೀಸ್ ಮಾಲೀಕರು, ಇವರು ತಮ್ಮ ಸ್ಥಾವರದ ವಿದ್ಯುತ್ ಪರಿವರ್ತಕದ ಜಿ.ಓ.ಎಸ್ ರೀಪೇರಿ ಮಾಡಲು ತಿಳಿಸಿದರು.

   ಅದಕ್ಕೆ ಅಧೀಕ್ಷಕ ಅಭಿಯಂತರರು (ವಿ) ರವರು ಸಂಭಂದಪಟ್ಟ ಶಾಖಾಧಿಕಾರಿಗಳಿಗೆ ಮೇಲ್ ಹಾಗೂ ಫಿಮೇಲ್ ಕಂಟ್ಯಾಕ್ಟ ಬದಲಾಯಿಸಲು ಅಥವಾ ಆಪರೇಟ್ ಆಗುವಂತೆ ನಿರ್ವಹಣೆ ಮಾಡಲು ಸೂಚಿಸಿದರು.

4. ಶ್ರೀ ಪಡೆಪ್ಪ ಪೂಜಾರಿ ಮೈಲಾಪುರ್, ಇವರು ಮೈಲಾಪುರ್ ಗ್ರಾಮಕ್ಕೆ ವಿದ್ಯುತ್ ಸರಬರಾಜಿನಲ್ಲಿ ಪ್ರತಿದಿನ ಅಡಚಣೆಯಾಗುತ್ತಿದೆ ಹಾಗೂ ಇದನ್ನು ಸರಿಪಡಿಸಲು ಕೋರಿದರು.

ಅದಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಯಾದಗಿರಿ ರವರು ಹೊಸದಾಗಿ ಆರಂಭಗೊಂಡ ಬದ್ದೇಪಲ್ಲಿ 33/11 ಕೆವಿ ವಿದ್ಯುತ್ ಉಪಕೇಂದ್ರಕ್ಕೆ ಯಾದಗಿರಿ 110/33/11 ಕೆವಿ ವಿದ್ಯುತ್ ಉಪಕೇಂದ್ರದಿಂದ ಬಳಿಚಕ್ರ ಹಾಗೂ ಬದ್ದೇಪಲ್ಲಿ ಸ್ಟೇಷನ್‌ಗಳಿಗೆ ವಿದ್ಯುತ್ ಮಾರ್ಗವಿದ್ದು ಇದರಿಂದ ಲೈನ್‌ಫಾಲ್ಟ್ ಬರುತ್ತಿದೆ. ಸೈದಾಪುರ್ 110/11 ಕೆವಿ ವಿದ್ಯುತ್ ಕೇಂದ್ರದಲ್ಲಿ 20 ಎಮ್.ವಿ.ಎ ವಿದ್ಯುತ್ ಪರಿವರ್ತಕ ಅಳವಡಿಸಿದ ನಂತರ ಬದ್ದೇಪಲ್ಲಿ ಸ್ಟೇಷನ್‌ಗೆ ಸೈದಾಪುರದಿಂದ ವಿದ್ಯುತ್ ಮಾರ್ಗ ಕಲ್ಪಿಸಲಾಗುತ್ತದೆ. ಆಗ ಬಳಿಚಕ್ರ ಹಾಗೂ ಬದ್ದೇಪಲ್ಲಿ ಸ್ಟೇಷನ್‌ಗಳಿಗೆ ಬೇರೆ ಬೇರೆ ಕೇಂದ್ರದಿಂದ ಸರಬರಾಜು ಆಗುತ್ತದೆ ಎಂದು ತಿಳಿಸಿದರು.

5. ಶ್ರೀ ವಿಠ್ಠಲ್ ಚವ್ಹಾಣ್, ಇವರು ಯರಗೋಳ್ ಗ್ರಾಮದಲ್ಲಿನ ವಿದ್ಯುತ್ ತಂತಿಗಳು ಬಹಳ ಹಳೆಯದಾಗಿರುತ್ತದೆ. ಆದ್ದರಿಂದ ಗ್ರಾಮದಲ್ಲಿ ಆಗಾಗ ವಿದ್ಯುತ್ ತಂತಿಗಳು ಕಡಿದು ಬೀಳುತ್ತಿವೆ ಇದರಿಂದ ಜೀವದ ಭಯವಿರುತ್ತದೆ ಎಂದು ತಿಳಿಸಿದರು.

ಅದಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ರವರು ಯರಗೋಳ ಗ್ರಾಮದಲ್ಲಿ ರೀಕಂಡಕ್ಟರಿಂಗ್ ಕಾಮಾಗಾರಿಗಳನ್ನು ಆದ್ಯತೆಯ ಮೇರೆಗೆ ಹಂತ ಹಂತವಾಗಿ ಕೈಗೊಳ್ಳಲು ಬೇಕಾದ ಅವಶ್ಯ ಕ್ರಮ ಕೈಗೊಳ್ಳಲು ಸಂಬಂಧಿಸಿದ ಶಾಖಾಧಿಕಾರಿಗಳಿಗೆ ಸೂಚಿಸಿದರು.

6. ನೂರ್ ರೈಸ್ ಮಿಲ್ ಮಾಲೀಕರು, ಇಂಡಸ್ಟ್ರೀಸ್ ಏರಿಯಾದಲ್ಲಿ ವಿದ್ಯುತ್ ಸರಬರಾಜು ಸರಿಯಾಗಿರುವುದಿಲ್ಲವೆಂದು ತಿಳಿಸಿದರು.

ಅದಕ್ಕೆ ಸಹಾಯಕ ಕಾರ್ಯಾನಿರ್ವಾಹಕ ಅಭಿಯಂತರರು (ವಿ) ರವರು ಈಗಾಗಲೇ ಇಂಡಸ್ಟ್ರೀಸ್ ಏರಿಯಾಕ್ಕೆ ಹೊಸ ಫೀಡರ್ ನಿರ್ಮಾಣ ಕಾರ್ಯ ಹಂತದಲ್ಲಿರುತ್ತದೆ ಎಂದು ತಿಳಿಸಿದರು.

7. ಶ್ರೀ ಪುರುಷೋತ್ತಮ್ ಯಾದಗಿರಿ, ಇವರು ಮಾತಾಮಾಣಿಕೇಶ್ವರಿ ನಗರದಲ್ಲಿ ವಿದ್ಯುತ್ ಲೈನ್‌ಗಳಿಗೆ ಗಿಡ ಮರಗಳು ತಾಗುತ್ತಿರುತ್ತವೆ ಇದರಿಂದ ಲೈನ್‌ಫಾಲ್ಟ್‌ಗಳು ಬರುತ್ತಿವೆ ಎಂದು ತಿಳಿಸಿದರು.

ಅದಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ), ರವರು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ನಿರ್ವಹಣೆ ಕಾರ್ಯಗಳನ್ನು ಅಂದರೆ ಮರದ ರೆಂಬೆ ಕೊಂಬೆಗಳನ್ನು ಕತ್ತರಿಸಲು ಸೂಚಿಸಿದರು.

8. ಶ್ರೀ ಶರಣಗೌಡ ತಳಕರವರು ಮಾತಾನಾಡುತ್ತಾ 63 ಕೆವಿಎ ಐಪಿ ಸೆಟ್ ಪರಿವರ್ತಕ ಲೋಡ್ ಹೆಚ್ಚಾಗಿದ್ದು ಅದಕ್ಕೆ 100 ಕೆವಿಎ ಹೆಚ್ಚಿಸಬೇಕು ಎಂದು ತಿಳಿಸಿದರು.

ಅದಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ರವರು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿಯನ್ನು ತಯಾರಿಸಲು ಸೂಚಿಸಿದರು.

9. ಶ್ರೀ ಭೀಮರಾಯ ಬಳಿಚಕ್ರರವರು 33 ಕೆವಿ ಲೈನ್‌ಫಾಲ್ಟ್ ಪ್ರತಿನಿತ್ಯ ಬರುತ್ತಿದೆ ಇದರಿಂದ ದಿನಾಲು ಗ್ರಾಹಕರಿಗೆ ತೊಂದರೆಯಾಗುತ್ತಿದೆ.

ಅದಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ರವರು ಮಳೆ ಗಾಳಿಯ ಕಾರಣ ಲೈನ್‌ಫಾಲ್ಟ್ ಬರುತ್ತಿದೆ ಅದಕ್ಕೆ ನಿರ್ವಹಣಾ ಕಾರ್ಯ ಕೈಗೊಳ್ಳುತ್ತಿದ್ದು ಲೈನ್‌ಫಾಲ್ಟ್ ಬರುವುದನ್ನು ತಡೆಯಲಾಗುವುದು ಎಂದು ತಿಳಿಸಿದರು.

ಸಭೆಯು ಬೆಳಿಗ್ಗೆ 10.00 ಗಂಟೆಗೆ ಆರಂಭವಾಗಿ 12:00 ಗಂಟೆಗೆ ಮುಕ್ತಾಯವಾಗಿರುತ್ತದೆ.

ತಮ್ಮ ವಿಶ್ವಾಸಿ,

ಅಧೀಕ್ಷಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನೆ ವೃತ್ತ
ಗು.ವಿ.ಸ.ಕಂ.ನಿ, ಕಲಬುರಗಿ.

ಪ್ರತಿಗಳು:

1. ಮುಖ್ಯ ಅಭಿಯಂತರರು (ವಿದ್ಯುತ್)., ಕಾರ್ಯ ಮತ್ತು ಪಾಲನೆ ವಲಯ ಕಛೇರಿ ಕಲಬುರಗಿ ರವರ ದಯಾಪರ ಮಾಹಿತಿಗಾಗಿ.
2. ಸಹಾಯಕ ಅಭಿಯಂತರರು (ವಿ)., ಕಾರ್ಯ ಮತ್ತು ಪಾಲನೆ ಉಪ-ವಿಭಾಗ, ಜೆಸ್ಕಾಂ ಯಾದಗಿರಿ.

# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ಫೋನ ನಂಬರ:-221830/256950
ಫ್ಯಾಕ್ಸ್ ನಂಬರ:-256403
ಇ-ಮೇಲ:-seeonmcrl@gmail.com

ಅಧೀಕ್ಷಕಅಭಿಯಂತರರು (ವಿ),ರವರಕಛೇರಿ,
ಕಾರ್ಯ ಮತ್ತು ಪಾಲನೆ ವೃತ್ತ ,
ಗು.ವಿ.ಸ.ಕಂ.ನಿ, ಕಲಬುರಗಿ.

ಅ.ಅ.(ಕಾ ಮತ್ತು ಪಾ ವೃತ್ತ)/ಕ/ಕಾನಿಅ(ಕ)/ಸಕಾನಿಅ-2/19-20/ 7008-09 ದಿನಾಂಕ:
ಲಗತ್ತು :

## ಗ್ರಾಹಕರ ಕುಂದು ಕೊರತೆಗಳ ಜನ ಸಂಪರ್ಕ ಸಭೆಯ ನಡುವಳಿಗಳು

ದಿನಾಂಕ 11.07.2019 ರಂದು ಗುರುಮಿಠಕಲ್ ಉಪ-ವಿಭಾಗ ಕಛೇರಿಯಲ್ಲಿ ಗ್ರಾಹಕರ ಕುಂದು ಕೊರತೆಗಳ ಜನ ಸಂಪರ್ಕ ಸಭೆಯನ್ನು ಮಾನ್ಯ ಅಧೀಕ್ಷಕ ಅಭಿಯಂತರರು(ವಿ) ಗು.ವಿ.ಸ.ಕಂ.ನಿ. ಕಾರ್ಯ ಮತ್ತು ಪಾಲನಾ ವೃತ್ತ, ಕಲಬುರಗಿ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಈ ಸಭೆಗೆ ಉಪಸ್ಥಿತರಿದ್ದ ಅಧಿಕಾರಿಗಳು.

1. ಶ್ರೀ ಆರ್.ಎಸ್.ಮೋಹನ್‌ಕುಮಾರ್ , ಮಾನ್ಯ ಅಧೀಕ್ಷಕ ಅಭಿಯಂತರರು(ವಿ) ಗು.ವಿ.ಸ.ಕಂ.ನಿ. ಕಾರ್ಯ ಮತ್ತು ಪಾಲನಾ ವೃತ್ತ, ಕಲಬುರಗಿ
2. ಶ್ರೀ ನಾರಾಯಣ ಭೋವಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾ ಮತ್ತು ಪಾ ಉಪ-ವಿಭಾಗ ಗು.ವಿ.ಸ.ಕಂ.ನಿ. ಗುರುಮಿಠಕಲ್.
3. ಶ್ರೀ ಮಹಾಂತೇಶ್, ಸಹಾಯಕ ಅಭಿಯಂತರರು (ತಾಂತ್ರಿಕ) ಕಾ ಮತ್ತು ಪಾ ಉಪ-ವಿಭಾಗ ಗು.ವಿ.ಸ.ಕಂ.ನಿ. ಗುರುಮಿಠಕಲ್.
4. ಶ್ರೀ ಶರಣಬಸಪ್ಪ ಶಾಖಾಧಿಕಾರಿಗಳು ಗುರುಮಿಠಕಲ್..
5. ಶ್ರೀ ನರಸಿಮುಲು ಶಾಖಾಧಿಕಾರಿಗಳು ಕೊಂಕಲ್.
6. ಶ್ರೀ ಸಂದೀಪ್ ಶಾಖಾಧಿಕಾರಿಗಳು ಗಾಜರಕೋಟ.
7. ಶ್ರೀ ತಿಪ್ಪಣ್ಣ ಶಾಖಾಧಿಕಾರಿಗಳು ಜೈಗ್ರಾಂ.
   ಮತ್ತು ಗುರುಮಿಠಕಲ್ ಉಪ-ವಿಭಾಗದ ಸಿಬ್ಬಂದಿಗಳು, ವಿದ್ಯುತ್ ಗುತ್ತಿಗೆದಾರರು.

ಈ ದಿನದ ಸಭೆಯಲ್ಲಿ ಗುರುಮಿಠಕಲ್ ತಾಲ್ಲೂಕಿನ ಸಾರ್ವಜನಿಕರ ಕುಂದು ಕೊರತೆಗಳನ್ನು ಅರಿಯುವ ಬಗ್ಗೆ ಜನಸಂಪರ್ಕ ಸಭೆಯನ್ನು ನಡೆಸಿದ್ದು, ಸದರಿ ಸಭೆಗೆ ಹಾಜರಿರುವ ಎಲ್ಲಾರಿಗೂ ಸ್ವಾಗತವನ್ನು ಕೋರುತ್ತಾ ಗ್ರಾಹಕರಿಗೆ ತಮ್ಮ ಸಮಸ್ಯೆಗಳನ್ನು ತಿಳಿಸಲು ಹೇಳಿದರು.

1. ಶ್ರೀ ಆಶಣ್ಣ ಪುರಸಭೆ ಸದಸ್ಯರು ಗುರುಮಿಠಕಲ್, ಅತೀ ದೂರವಿರುವ ಸರ್ವಿಸ್ ಲೈನ್‌ಗಳಲ್ಲಿ ಮಧ್ಯಂತರ ವಿದ್ಯುತ್ ಕಂಬಗಳನ್ನು ಅಳವಡಿಸಬೇಕು ಎಂದು ಹೇಳಿದರು.

   ಅದಕ್ಕೆ ಮಾನ್ಯ ಅಧೀಕ್ಷಕ ಅಭಿಯಂತರರು(ವಿ) ರವರು ಸ್ಥಳ ಪರಿಶೀಲನೆ ಮಾಡಿ ಐ.ಪಿ.ಡಿ.ಎಸ್ ಯೋಜನೆಯಡಿಯಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)ರವರಿಗೆ ಸೂಚಿಸಿದರು.

2. ಸದರಿ ಸಭೆಯಲ್ಲಿ ಹಾಜರಿದ್ದ ಇನೋರ್ವ ಗ್ರಾಹಕರಾದ ಶ್ರೀ ಸದಾನಂದ ಮತ್ತು ಗಂಗಾನಗರದ ನಿವಾಸಿಗಳು ಗುರುಮಿಠಕಲ್, ಹೊಸ ಲೇಔಟ್‌ಗಳಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಬೇಕೆಂದು ಕೋರಿದರು.

ಇದಕ್ಕೆ ಮಾನ್ಯ ಅಧೀಕ್ಷಕ ಅಭಿಯಂತರರು(ವಿ) ರವರು ಕಂಪನಿಯ ನಿಯಮದ ಪ್ರಕಾರ ವಿದ್ಯುತ್ ಸಂಪರ್ಕ ಪಡೆಯಲು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ರವರಿಗೆ ಸ್ಥಳವನ್ನು ಪರೀಶೀಲಿಸಿ, ವಿವರವಾದ ವದಿಯನ್ನು ಸಲ್ಲಿಸಲು ಸೂಚಿಸಿದರು.

3. ಶ್ರೀ ವೆಂಕಟೇಶ್ ಪುರಸಭೆ ಸದಸ್ಯರು ಗುರುಮಿಠಕಲ್, ಗುರುಮಿಠಕಲ್ ಪಟ್ಟಣದಲ್ಲಿನ ಹಲವಾರು ಬಡಜನರ ಮನೆಗಳಿಗೆ ವಿದ್ಯುತ್ ಮೀಟರ್ ಅಳವಡಿಸುವ ಬಗ್ಗೆ.

ಇದಕ್ಕೆ ವಿಚಾರಿಸಲಾಗಿ ಮಾನ್ಯ ಅಧೀಕ್ಷಕ ಅಭಿಯಂತರರು (ವಿ) ರವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸಲು ಸೂಚಿಸಿದರು.

ಈ ಮೇಲ್ಕಾಣಿಸಿದ ವಿಷಯಗಳನ್ನು ಮುಕ್ತವಾಗಿ ಚರ್ಚಿಸಿ ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳುವುದೆಂದು ಸಾರ್ವಜನಿಕರಿಗೆ ಧನ್ಯವಾದಗಳನ್ನು ಹೇಳಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಅಧೀಕ್ಷಕ ಅಭಿಯಂತರರು (ವಿ),
ಕಾರ್ಯ ಮತ್ತು ಪಾಲನೆ ವೃತ್ತ
ಜೆಸ್ಕಾಂ ಕಲಬುರಗಿ.

ಪ್ರತಿಗಳನ್ನು ದಯಾಪರ ಮಾಹಿತಿಗಾಗಿ.

1) ಮುಖ್ಯ ಅಭಿಯಂತರರು (ವಿದ್ಯುತ್), ವಲಯ ಕಛೇರಿ ಜೇಸ್ಕಾಂ, ಕಲಬುರಗಿ ರವರಿಗೆ.
2) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಜೆಸ್ಕಾಂ ಗುರಮಿಟಕಲ್ ರವರಿಗೆ.

# ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಫೋನ ನಂ : 08482-227892
ಫ್ಯಾಕ್ಸ್ ನಂ : 08482-222092
ಇ-ಮೇಲ್ :seonmbdr@gmail.com

ಅಧೀಕ್ಷಕ ಇಂಜಿನಿಯರ (ವಿ), ರವರ ಕಛೇರಿ
ಕಾರ್ಯ ಮತ್ತು ಪಾಲನೆ ವೃತ್ತ,
ಗು.ವಿ.ಸ.ಕಂ.ನಿ, ಬೀದರ.

101
28/8/19

ಸಂಖ್ಯೆ: ಬೀದರ/ಅ.ಅ/ಕಾ.ನಿಇಂ(ಕ)/ಸ.ಕಾ.ನಿಇಂ/ಸಇ(ತಾ)/ಕಿಇ-3/ಕ-86/2019-20/ 2120-22 ದಿನಾಂಕ: 16-08-19

ಗೆ,

ಮುಖ್ಯ ಅಭಿಯಂತರರು (ವಿದ್ಯುತ್),
ಕಾರ್ಯ ಮತ್ತು ಪಾಲನಾ ವಲಯ,
ಜೆಸ್ಕಾಂ, ಕಲಬುರಗಿ.

ಮಾನ್ಯರೆ,

**ವಿಷಯ :-** ಬೀದರ ವೃತ್ತದ ಜುಲೈ-19 ತಿಂಗಳಿನ ಮೂರನೇ ಶನಿವಾರದಂದು ನಡೆದ ಗ್ರಾಹಕ ಸಂವಾದ ಸಭೆಯ ನಡುವಳಿಗಳು.

**ಉಲ್ಲೇಖ:-** ಮುಖ್ಯ ಅಭಿಯಂತರರು(ವಿದ್ಯುತ್), ನಿಗಮ ಯೋಜನೆ ಕಲಬುರಗಿರವರ ಪತ್ರ ಸಂಖ್ಯೆ: ಸಿವೈಎಸ್-199 ದಿನಾಂಕ: 21.09.2017.

*****

ಮೇಲ್ಕಂಡ ವಿಷಯಕ್ಕೆ ಸಂಭಂದಿಸಿದಂತೆ, ಎಂ.ಎಮ್.ಆರ್ ಸಭೆಯಲ್ಲಿ ಸೂಚಿಸಿದಂತೆ ಮುಖ್ಯ ಅಭಿಯಂತರರು (ವಿದ್ಯುತ್), ನಿಗಮ ಯೋಜನೆ ಕಲಬುರಗಿರವರ ಉಲ್ಲೇಖಿತ ಪತ್ರದನ್ವಯ ಗ್ರಾಹಕರ ಕುಂದು ಕೊರತೆ ತಿಳಿದುಕೊಂಡು ಅವರ ಸಮಸ್ಯೆಗಳನ್ನು ಬಗೆಹರಿಸಲು ಗ್ರಾಹಕ ಸಂವಾದ ಸಭೆಯನ್ನು ತಿಂಗಳಿಗೊಮ್ಮೆ ಮೂರನೆಯ ಶನಿವಾರದಂದು ಮಧ್ಯಾಹ್ನ 3:00 ಗಂಟೆಯಿಂದ 5:30 ಗಂಟೆಯವರೆಗೆ ನಡೆಸಲು ಸುಚಿಸಲಾಗಿತ್ತು. ಅದರಂತೆ ಬೀದರ ವೃತ್ತದ ಎಲ್ಲಾ ಉಪ-ವಿಭಾಗಗಳಲ್ಲಿ ಕಾರ್ಯನಿರ್ವಾಹಕ ಅಭಿಯಂತರರು (ವಿ), ಕಾರ್ಯ ಮತ್ತು ಪಆಲನೆ ವಿಭಾಗ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ ನಡೆಸಲಾಗಿದೆ.

| ಕ್ರಮ ಸಂಖ್ಯೆ | ವಿಭಾಗದ ಹೆಸರು | ಉಪ-ವಿಭಾಗದ ಹೆಸರು | ಸಭೆ ನಡೆದ ದಿನಾಂಕ | ಷರಾ |
|---|---|---|---|---|
| 1 | ಬೀದರ | ಕಮಠಾಣಾ | 22.07.2019 | ಸ.ಕಾ.ನಿ.ಅಭಿಯಂತರರು, ಕಾ ಮತ್ತು ಪಾ ಉಪ ವಿಭಾಗ, ಜೆಸ್ಕಾಂ, ಕಮಠಾಣಾ ರವರ ಅಧ್ಯಕ್ಷತೆಯಲ್ಲಿ |
| | | ಬೀದರ | 22.07.2019 | ಕಾ.ನಿ.ಅಭಿಯಂತರರು, ಕಾ ಮತ್ತು ಪಾ ವಿಭಾಗ, ಜೆಸ್ಕಾಂ,ಬೀದರ ರವರ ಅಧ್ಯಕ್ಷತೆಯಲ್ಲಿ |
| | | ಔರಾದ | 20.07.2019 | ಸ.ಕಾ.ನಿ.ಅಭಿಯಂತರರು, ಕಾ ಮತ್ತು ಪಾ ಉಪ ವಿಭಾಗ, ಜೆಸ್ಕಾಂ, ಔರಾದ ರವರ ಅಧ್ಯಕ್ಷತೆಯಲ್ಲಿ |
| | | ಭಾಲ್ಕಿ | 22.07.2019 | ಸ.ಕಾ.ನಿ.ಅಭಿಯಂತರರು, ಕಾ ಮತ್ತು ಪಾ ಉಪ ವಿಭಾಗ, ಜೆಸ್ಕಾಂ, ಭಾಲ್ಕಿ ರವರ ಅಧ್ಯಕ್ಷತೆಯಲ್ಲಿ |
| 2 | ಹುಮನಾಬಾದ | ಹುಮನಾಬಾದ | 20.07.2019 | ಸ.ಕಾ.ನಿ.ಅಭಿಯಂತರರು, ಕಾ ಮತ್ತು ಪಾ ಉಪ ವಿಭಾಗ, ಜೆಸ್ಕಾಂ,, ಹುಮನಾಬಾದ ರವರ ಅಧ್ಯಕ್ಷತೆಯಲ್ಲಿ |
| | | ಬಸವಕಲ್ಯಾಣ | 26.07.2019 | ಸ.ಕಾ.ನಿ.ಅಭಿಯಂತರರು, ಕಾ ಮತ್ತು ಪಾ ಉಪ ವಿಭಾಗ, ಜೆಸ್ಕಾಂ, ಬಸವಕಲ್ಯಾಣ ರವರ ಅಧ್ಯಕ್ಷತೆಯಲ್ಲಿ |
| | | ಮನ್ನಾಎಖ್ಖೇಳ್ಳಿ | 20.07.2019 | ಸ.ಕಾ.ನಿ.ಅಭಿಯಂತರರು, ಕಾ ಮತ್ತು ಪಾ ಉಪ ವಿಭಾಗ, ಜೆಸ್ಕಾಂ, ಮನ್ನಾಎಖ್ಖೇಳ್ಳಿ ರವರ ಅಧ್ಯಕ್ಷತೆಯಲ್ಲಿ |

ಸದರಿ ಗ್ರಾಹಕ ಸಂವಾದ ಸಭೆಯ ಅನುಸರಣಾ ವರದಿಯನ್ನು ಛಾಯಾಚಿತ್ರಗಳೊಂದಿಗೆ ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.

2982
23/8/19

ತಮ್ಮ ವಿಶ್ವಾಸಿ,
16/8/2019
ಅಧೀಕ್ಷಕ ಅಭಿಯಂತರರು (ವಿ),
ಕಾರ್ಯ ಮತ್ತು ಪಾಲನೆ ವೃತ್ತ,
ಗು.ವಿ.ಸ.ಕಂ.ನಿ, ಬೀದರ.

ಪ್ರತಿಯನ್ನು ದಯಾಪರರ ಮಾಹಿತಿಗಾಗಿ :-

1) ಮುಖ್ಯ ಅಭಿಯಂತರರು (ವಿದ್ಯುತ್), ಕಾರ್ಯಾಚರಣೆ, ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ.
2) ಕಾರ್ಯನಿರ್ವಾಹಕ ಅಭಿಯಂತರರು (ವಿ), ನಿಯಂತ್ರಣ ವ್ಯವಹಾರಗಳು, ನಿಗಮ ಕಛೇರಿ, ಗುವಿಸಕಂನಿ, ಕಲಬುರಗಿ.

AAO

ಮುಕ/ಸ.ಕಾ.ನಿ.ಅ(ಕ).

28/8